ವಾರದ ಪತ್ರ

## ಬಸಿರು ಗ್ಲಾಮರ್ ಕೆಡಿಸೀತೆ?

ಝೀ ಕನ್ನಡದ 'ಗಟ್ಟಿಮೇಳ'ದ ಆರತಿ, 'ಪಾರು'ವಿನ ಪಾರ್ವತಿ ಮತ್ತು ಜನನಿ, 'ಜೊತೆಜೊತೆಯಲಿ'ಯ ಅನು ಸಿರಿಮನೆ ಇವರೆಲ್ಲಾ ಗರ್ಭಿಣಿಯರಾಗಿ ಒಂಬತ್ತು ತಿಂಗಳು ತುಂಬುತ್ತಿದೆ. ಸೀಮಂತದ ತಯಾರಿ ನಡೆಯುತ್ತಿದೆ. ಆದರೆ, ಅವರ್‍ಯಾರೂ ಗರ್ಭಿಣಿಯರಂತೆ ಕಾಣಿಸುತ್ತಲೇ ಇಲ್ಲ. ಪಾತ್ರಗಳಿಗೆ ನ್ಯಾಯ ಒದಗಿಸುವ ಸಲುವಾಗಿ ತೆರೆಯ ಮೇಲೆ ಗರ್ಭಿಣಿಯರಂತೆ ಕಾಣಿಸಿಕೊಳ್ಳಬೇಕು. ದಿನನಿತ್ಯ ಬದಲಾಗುತ್ತಿರುವ ಹೊಟ್ಟೆಯ ಗಾತ್ರದಂತೆ ಮೇಕಪ್ ಏಕೆ ಮಾಡಿಸಿಕೊಳ್ಳುತ್ತಿಲ್ಲ? ವೀಕ್ಷಕರು ಧಾರಾವಾಹಿಗಳಿಗೆ ಅದೆಷ್ಟೇ ಅಡಿಯಾಳುಗಳಾಗಿದ್ದರೂ ಇಂತಹ ಸೂಕ್ಷ್ಮ ವಿಚಾರಗಳನ್ನೂ ಗಮನಿಸುತ್ತಾರೆ.

—ರಮಣ್ ಶೆಟ್ಟಿ ರೆಂಜಾಳ್, ಮುಂಬೈ

## ಮಾನಸ ಸರೋವರದಲ್ಲಿ ಕೋಲಾಹಲ

ಒಂಬತ್ತು ವರ್ಷದ ಮಗನನ್ನು ಆ ತಾಯಿ ವೈದ್ಯರ ಬಳಿ ಕರೆತಂದಿದ್ದರು. ಕಟ್ಟಡದಿಂದ ಜಂಪ್ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಮಗ ಆಗಾಗ ಹೇಳುತ್ತಿದ್ದನಂತೆ. ಹಾಗೇಕೆ ಹೇಳುತ್ತಿದ್ದಾನೆ ಎಂದಾಗ ಆ ತಾಯಿ ಹೇಳಿದ ಮಾತು ದಿಗಿಲು ಹುಟ್ಟಿಸಿತ್ತು.

ಆ ಮಹಿಳೆ ಪ್ರತಿದಿನ ಕಲರ್ಸ್ ಕನ್ನಡದ 'ಶಾಂತಂ ಪಾಪಂ' ಕಾರ್ಯಕ್ರಮವನ್ನು ನೋಡುತ್ತಿದ್ದರಂತೆ. ಅವರ ಜೊತೆ ಮಗನೂ ನೋಡುತ್ತಿದ್ದನಂತೆ. ಅದನ್ನು ನೋಡಿ ನೋಡಿ ಆ ಮಗು ಆಗಾಗ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ ಎಂದು ಹೆದರಿಸುತ್ತಿದ್ದಾನಂತೆ! ಇಂತಹ ಮಕ್ಕಳ ಜೊತೆ ಅಂತಹ ತಾಯಂದಿರಿಗೂ ಆಪ್ತಸಲಹೆ ಅತ್ಯಗತ್ಯ.

—ಪಿ.ಜೆ. ರಾಘವೇಂದ್ರ, ಮೈಸೂರು

## ಸಾವಿರ ಕಂತಿಗೆ ಒಬ್ಬ ವಿಲನ್!

ಝೀ ಕನ್ನಡದ 'ಹಿಟ್ಲರ್ ಕಲ್ಯಾಣ'ದಲ್ಲಿ ಲಾಜಿಕ್ ಇಲ್ಲದೆ ಕಥೆಯನ್ನು ಎಳೆಯುತ್ತಿದ್ದಾರೆ. ಇತ್ತೀಚಿನ ಟೀವಿ ಧಾರಾವಾಹಿಗಳನ್ನು ನೋಡಿದರೆ ನಿರ್ದಿಷ್ಟ ಕಥಾಹಂದರದ ಅವಶ್ಯಕತೆ ಬೇಕಿಲ್ಲ ಎಂದೆನಿಸುತ್ತದೆ. ಒಬ್ಬ ಖಳನಾಯಕ/ಖಳನಾಯಕಿ ಇದ್ದರೆ ಸಾವಿರ ಎಪಿಸೋಡ್ ದಾಟಿಸಬಹುದು. ಈ ವಾಸ್ತವ ಸ್ಥಿತಿಯ ಅರಿವು ಕಲಾವಿದರಿಗೂ ಇದೆ. ಗಾಳಿ ಬಂದ ಕಡೆ ತೂರಿಕೋ ಎಂಬ ಮನಸ್ಥಿತಿಯಲ್ಲಿ ಅವರೂ ಬಣ್ಣ ಹಚ್ಚುತ್ತಿದ್ದಾರೆ. ಹೇಗೂ ಸಮಯ ಕಳೆಯಬೇಕು ಎಂದು ಜನ ಅವುಗಳನ್ನೇ ನೋಡುತ್ತಿದ್ದಾರೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಜಿದ್ದಿಗೆ ಬಿದ್ದಿರುವ 'ಜೊತೆ ಜೊತೆಯಲಿ'

ಮರಾಠಿಯಲ್ಲಿ ಹೆಸರು ಮಾಡಿದ ಧಾರಾವಾಹಿಗಳು ಈಗ ಕನ್ನಡದಲ್ಲೂ ಸಿಗುತ್ತಿವೆ. 'ತುಲ ಪೆಹತಾ ರೇ' ಎನ್ನುವುದು ಕನ್ನಡದಲ್ಲಿ 'ಜೊತೆ ಜೊತೆಯಲಿ' ಎಂದಾಗಿದೆ. ಅದರಲ್ಲಿ ಪ್ರಮುಖ ಪಾತ್ರಧಾರಿಯ ಬದಲಾವಣೆಯ ನಂತರ ಕಥೆಯ ಹರವಿಗೆ ಏನೇನೋ ತಂತ್ರಗಳನ್ನು ಹೆಣೆಯಲಾಯಿತು. ಅಲ್ಲಿಗೇ ಮುಗಿಸಿದ್ದರೆ ಚೆನ್ನಾಗಿರುತ್ತಿತ್ತು. ಮೂಲದಲ್ಲಿ ಇದು ಕೇವಲ 298 ಕಂತು ಹೊಂದಿತ್ತು.

ಕನ್ನಡದಲ್ಲಿ ಡಬ್ ಮಾಡಿದ ಅದು 900ನೇ ಸಂಚಿಕೆಯನ್ನು ಸಮೀಪಿಸುತ್ತಿದೆ. ಆದರೂ ಮುಗಿಯುವ ಲಕ್ಷಣ ಮಾತ್ರ ಇನ್ನೂ ಕಾಣುತ್ತಿಲ್ಲ. ಜಿದ್ದಿಗೆ ಬಿದ್ದು ಕಥೆಯನ್ನು ಚೂಯಿಂಗ್ ಗಮ್ಮಿನಂತೆ ಎಳೆಯುತ್ತಿರುವುದು ಸರಿಯಲ್ಲ. ಇದು 'ಅತಿಯಾದರೆ ಅಮೃತವೂ ವಿಷ' ಎಂಬ ನಾಣ್ಣುಡಿಯನ್ನು ನೆನಪಿಸುತ್ತದೆ. ಕೂಡಲೇ ಕಥೆಗೆ ಸುಖಾಂತ್ಯ ಹಾಡಿ.

—ವಾ. ಮುರಳೀಧರ, ತೀರ್ಥಹಳ್ಳಿ

## ಮಾಯಾಮೃಗ ವೀಕ್ಷಕರ ಮನ ತಿಳಿಯಲಿ

ಸಿರಿ ಕನ್ನಡದಲ್ಲಿ 'ಮತ್ತೆ ಮಾಯಾಮೃಗ' ಅಚ್ಚುಕಟ್ಟಾಗಿ ಮೂಡಿಬರುತ್ತಿದೆ. ಕಥೆಯ ಹಂದರ ಮತ್ತು ತಾಂತ್ರಿಕ ಕೆಲಸ ಮೆಚ್ಚುವಂತಿದೆ. ವರ್ಷಗಟ್ಟಲೆ ನೋಡುತ್ತಿರುವ ಕೆಲವು ಅರ್ಥಹೀನ ಧಾರಾವಾಹಿಗಳಿಂದ ಬೇಸತ್ತಿರುವ ವೀಕ್ಷಕರಿಗೆ ಇದು ಮುದ ನೀಡುತ್ತಿದೆ.

ಹಿಂದಿನ ಸಂಚಿಕೆಯ ಘಟನೆಗಳು ಪುನರಾವರ್ತನೆಯಾಗುವುದನ್ನು ತಡೆದರೆ ವೀಕ್ಷಕರಿಗೆ ಉಂಟಾಗುವ ಕಸಿವಿಸಿ ತಪ್ಪಿಸಬಹುದು. ಅಪ್ಪನನ್ನು ಹಣಕ್ಕಾಗಿ ಮುಗಿಸಲು ಮಗ–ಸೊಸೆ ಹೂಡುವ ಷಡ್ಯಂತ್ರ, ಅನೀತಿ ಗಾಬರಿ ಹುಟ್ಟಿಸುವಂತಿದೆ. ವೀಕ್ಷಕರ ಸಂವಾದ ನಡೆಸಿ, ಅಭಿಪ್ರಾಯ ಪಡೆದು ಮುಂದಿನ ಸಂಚಿಕೆಗಳಲ್ಲಿ ಮಾರ್ಪಾಡು ಮಾಡಬಹುದು. ಇದರಿಂದ ಧಾರಾವಾಹಿ ಇನ್ನೂ ಯಶಸ್ಸು ಸಾಧಿಸಬಹುದು.

—ವಿ. ಸುರೇಶ್, ಹುಬ್ಬಳ್ಳಿ

## ಗಡಿಬಿಡಿ ಅಂತ್ಯ ನ್ಯಾಯವೆ?

ಬಹುತೇಕ ಧಾರಾವಾಹಿಗಳಲ್ಲಿ ಖಳನಾಯಕಿಯರ ಆರ್ಭಟ ಮಿತಿಮೀರಿರುವುದು ವೀಕ್ಷಕರಿಗೆ ತಿಳಿದಿರುವ ವಿಚಾರ. ಇನ್ನೇನು ಇವರ ಉಪದ್ರ ಕಡಿಮೆಯಾಗಿ ನಾಯಕ/ನಾಯಕಿಗೆ ಮೋಕ್ಷ ಸಿಕ್ಕು ಜಯ ಸಿಗಬಹುದು ಎಂದು ವೀಕ್ಷಕರಿಗೆ ಕುತೂಹಲ ಉಂಟಾಗುತ್ತದೆ. ಆದರೆ, ತಕ್ಷಣ ಖಳನಾಯಕಿ ಕಥೆಗೆ ಮತ್ತೊಂದು ಆಘಾತಕಾರಿ ಹೊಸ ತಿರುವು ನೀಡುತ್ತಾಳೆ. ಇದರ ಜಗ್ಗಾಟದಲ್ಲಿ ವೀಕ್ಷಕರು ಧಾರಾವಾಹಿಯಲ್ಲಿ ಆಕರ್ಷಣೆ ಕಳೆದುಕೊಳ್ಳುತ್ತಾರೆ. ಅಷ್ಟರಲ್ಲಿ ಗಡಿಬಿಡಿಯಿಂದ ಕಥೆಯಲ್ಲಿ ಸ್ವಲ್ಪ ಮಾರ್ಪಾಟು ಮಾಡುತ್ತಾರೆ. ಇಲ್ಲವೇ ಧಾರಾವಾಹಿ ದಿಢೀರ್ ಎಂದು ಹಲವಾರು ಪ್ರಶ್ನೆಗಳಿಗೆ ಉತ್ತರ ಸಿಗದಂತೆ ಮುಕ್ತಾಯವಾಗಿಬಿಡುತ್ತದೆ.

—ಹೆಚ್.ವಿ. ಶ್ರೀಧರ್, ಬೆಂಗಳೂರು

## ವಾಹಿನಿಗಳೇ... ಕಾದಂಬರಿಲೋಕ ಗಮನಿಸಿ

ಕನ್ನಡ ಕಿರುತೆರೆಯಲ್ಲಿ ಧಾರಾವಾಹಿಗಳನ್ನು ನೋಡುವಾಗ ಕಥೆಗಳ ಕೊರತೆ ಇರುವಂತೆ ಕಾಣುತ್ತದೆ. ಎಲ್ಲವೂ ಸಿದ್ಧ ಸೂತ್ರಗಳ ಅಡಿಯಲ್ಲಿಯೇ ನಡೆಯುತ್ತದೆ. ಆಗೆಲ್ಲ ಕನ್ನಡದಲ್ಲಿರುವ ಮನೋಜ್ಞ ಮತ್ತು ಮನಮಿಡಿಯುವ ಕಾದಂಬರಿಗಳನ್ನು ಬಳಸಬಾರದೇಕೆ ಎಂದು ಅನ್ನಿಸಿದೆ. ಕಾದಂಬರಿ ಎಷ್ಟೇ ದೊಡ್ಡದಿರಲಿ ಅವುಗಳನ್ನು ಕಿರುತೆರೆಗೆ ಇಳಿಸಬಹುದು. ಕನ್ನಡದ ಕಿರುತೆರೆ ಈ ನಿಟ್ಟಿನಲ್ಲಿ ಪ್ರಯೋಗ ಮಾಡಬಹುದೇ?

—ರಮಾನಂದ ಶರ್ಮಾ, ಬೆಂಗಳೂರು

## ಕಿರಿಕಿರಿಯ ಪ್ರಸ್ತ

ಉದಯ ಟೀವಿಯ 'ಅಣ್ಣತಂಗಿ' ಧಾರಾವಾಹಿಯ ಇತ್ತೀಚಿನ ದೃಶ್ಯಗಳು ಮುಜುಗರ ತರುವಂತಿವೆ. ಮನೆಯಲ್ಲಿ ಪ್ರತಿಯೊಬ್ಬರೂ ಪ್ರಸ್ತದ ಬಗ್ಗೆ ಮಾತಾಡುವುದು.,ಇಂದ್ರನ ತಂದೆಯ ವರ್ತನೆ ಅಸಹ್ಯ ಉಂಟು ಮಾಡುತ್ತದೆ. ತುಳಸಿ ಪ್ರಸ್ತದ ಬಗ್ಗೆ ವಿವರ ನೀಡುವುದು ಕಿರಿಕಿರಿಯನ್ನು ತರುತ್ತದೆ. ದಯವಿಟ್ಟು ಮನೆಮಂದಿಯೆಲ್ಲ ಒಟ್ಟಾಗಿ ಕುಳಿತು ನೋಡುವಂತೆ ದೃಶ್ಯ ಚಿತ್ರಿಸಿ.

—ರಮಾ ಗೋವಿಂದರಾಜು, ಬೆಂಗಳೂರು

## ಗೀತಾಳ ಮದುವೆ ಯಾವಾಗ?

ಕಲರ್ಸ್ ಕನ್ನಡದ 'ಗೀತಾ'ದಲ್ಲಿ ಗೀತಾ ಮತ್ತು ವಿಜಿ ಇಬ್ಬರೂ ಕಾಲೇಜಿನಲ್ಲಿ ಓದುತ್ತಿದ್ದಾಗ ಪ್ರೀತಿ ಹುಟ್ಟಿತ್ತು. ಇಬ್ಬರ ನಡುವೆ ಅನುರಾಗ–ದ್ವೇಷ ಮುಂದುವರಿಯುತ್ತಲೇ ಇದೆ. ಕಾಲೇಜಾಯ್ತು, ಕಾಡುಮೇಡು ಅಲೆದಾಡಿದ್ದೂ ಆಯಿತು. ರಾಜಕೀಯದಲ್ಲಿ ಭಾವಿ ಅತ್ತೆಯ ವಿರುದ್ಧ ಚುನಾವಣೆ ಕಣದಲ್ಲಿ ಸ್ಪರ್ಧಿಸಿದ್ದೂ ಆಯಿತು. ಕಾರಣ ಇಲ್ಲದೆ ಕಾರಲ್ಲಿ ಸುತ್ತುತ್ತಿರುವ ಇವರಿಬ್ಬರಿಗೂ ಕಂಕಣ ಭಾಗ್ಯ ಇನ್ನೂ ಬಂದಿಲ್ಲ. ಗೀತಾ ತನ್ನ ತಾಯಿ ಬಗ್ಗೆ ಸುಳ್ಳು ಹೇಳಿದ್ದಾಳೆ ಎಂದು ವಿಜಿ ಅವಳ ಕೆನ್ನೆಗೆ ಹೊಡೆದದ್ದು ಸರಿಯಲ್ಲ. ಪುರುಷ ದೌರ್ಜನ್ಯವನ್ನು ಇದು ಪುರಸ್ಕರಿಸಿದಂತೆ ಆಗುತ್ತದೆ. ಈ ರೀತಿಯ ದೃಶ್ಯಗಳಿಗೆ ನಿರ್ಬಂಧ ಬೇಕು.

—ಶಾಂತಾ ನಾಗರಾಜ್ ಕೆ., ಬೆಂಗಳೂರು